**International Journal of Academic Research**
**ISSN: 2348-7666; Vol.3, Issue-1(2), January, 2016**
**Impact Factor: 3.075; Email: drtvramana@yahoo.co.in**

# ಕನ್ನಡ ರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳ ಪರಿಕಲ್ಪನೆ

## (The Concept of the Mythological Plays in Kannada Theatre)

**ಡಾ॥ ಎನ್. ಮಮತ**
ಸಹಾಯಕ ಪ್ರಾಧ್ಯಾಪಕರು
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಮೈಸೂರು ವಿಶ್ವವಿದ್ಯಾಲಯ
ಮೈಸೂರು.
Email: mamathauom@gmail.com

### ವೃತ್ತಿರಂಗ – ಪೌರಾಣಿಕ ನಾಟಕಗಳು

ಜನಪದ ರಂಗಭೂಮಿ ಹಾಗೂ ಸಂಸ್ಕೃತ ಶಿಷ್ಟ ರಂಗಭೂಮಿ ಎರಡನ್ನೂ ಮೇಳೈಸಿಕೊಂಡು ರೂಪುಗೊಂಡದ್ದೇ ವೃತ್ತಿರಂಗಭೂಮಿ. ಬ್ರಿಟೀಷರು ಮೊದಲಿಗೆ ಬಂಗಾಳದಲ್ಲಿ ಪಾಶ್ಚಿಮಾತ್ಯ ರಂಗಭೂಮಿಯನ್ನು ಪರಿಚಯಿಸಿದಾಗ, ಪಾರ್ಸಿ ಜನರು ದೇಸೀಯ ಮಾದರಿಯಲ್ಲಿ ಪಾಶ್ಚಿಮಾತ್ಯ ರಂಗಭೂಮಿಯನ್ನು ಅನುಕರಿಸಲು ಆರಂಭಿಸಿದರು.

ಪಾರ್ಸಿ ರಂಗಭೂಮಿಯಿಂದ ಪ್ರಭಾವಿತರಾದ ಮರಾಠಿಗರು ತಮ್ಮದೇ ಆದ ಹೊಸ ಶೈಲಿಯಲ್ಲಿ ನಾಟಕಗಳನ್ನು ಪ್ರದರ್ಶಿಸಲು ಆರಂಭಿಸಿದರು. ಮರಾಠಿ ರಂಗಭೂಮಿ ಕರ್ನಾಟಕಕ್ಕೆ ಲಗ್ಗೆಯಿಟ್ಟಾಗ ಮರಾಠಿ ಮತ್ತು ಪಾರ್ಸಿ ನಾಟಕಗಳನ್ನು ನೋಡಿ, ಸಂಸ್ಕೃತ ಸಾಹಿತ್ಯದ ಕಥಾವಸ್ತುವಿನೊಂದಿಗೆ ಜನಪದ ರಂಗಭೂಮಿಯನ್ನು ಮಾರ್ಪಡಿಸಿಕೊಂಡು, ನಮ್ಮಲ್ಲಿ ವೃತ್ತಿರಂಗಭೂಮಿ ಆರಂಭವಾಯಿತು. ಶಾಂತಕವಿಗಳ ಪರಿಶ್ರಮದೊಂದಿಗೆ 'ಗದುಗಿನ ಶ್ರೀ ವೀರನಾರಾಯಣ ಕೃತಪುರ ನಾಟಕ ಮಂಡಳಿ' ಸ್ಥಾಪನೆಯಾಯಿತು. ವೃತ್ತಿರಂಗಭೂಮಿಯ ಮೊದಲ ನಾಟಕವಾಗಿ ನಾವು 'ಉಷಾಹರಣ' ನಾಟಕವನ್ನು ಕಾಣಬಹುದು. ಶಾಂತಕವಿಗಳ ನಂತರ ಹಲವಾರು ರಂಗಾಸಕ್ತರು ಹಲವು ಕಂಪನಗಳನ್ನು ಸ್ಥಾಪಿಸಿದರು.

"ಉತ್ತರ ಕರ್ನಾಟಕದಲ್ಲಿ ವೃತ್ತಿಪರ ನಾಟಕ ಕಂಪೆನಿಗಳು ಚುರುಕಿನಂದಲೇ ಕಾರ್ಯಪ್ರವೃತ್ತವಾದವು. ಶಾಂತಕವಿಗಳು ಯಕ್ಷಗಾನ ಮತ್ತು ಬಯಲಾಟಗಳ ತಂತ್ರವನ್ನು ಅಳವಡಿಸಿಕೊಂಡು ನಾಟಕಗಳನ್ನು ಬರೆಯಲಾರಂಭಿಸಿದರು". ವೃತ್ತಿರಂಗಭೂಮಿಯ ಪೌರಾಣಿಕ ನಾಟಕಗಳು, ಜನರಲ್ಲಿ ಭಕ್ತಿ–ಭಾವದ ಬೀಜ ಬಿತ್ತುವುದರ ಮೂಲಕ ನೀತಿ–ಧರ್ಮ ಬೋಧಿಸುವ ಕೆಲಸ ಮಾಡಿದವು.

'ಕಂಪನಿ ನಾಟಕಗಳಲ್ಲಿ ಪೌರಾಣಿಕತೆ ಕೇವಲ ಭಕ್ತಿ–ಭಾವಗಳಿಗೆ ಆಹಾರವನ್ನೊದಗಿಸುವ ಕೆಲಸ ಮಾಡುತ್ತದೆ. ಆದ್ದರಿಂದ ಅಲ್ಲಿ ಸಂವಿಧಾನಕ್ಕಿಂತಲೂ ಚಮತ್ಕಾರಗೊಳಿಸುವ ಘಟನಾವಳಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ." ಹೀಗೆ ಈ ನಾಟಕಗಳು ದೈವದರ್ಶನ, ನೀತಿಬೋಧನೆ, ಭರ್ಜರಿ ವೇಷ–ಭೂಷಣ, ಧರ್ಮದ ಪರಾಕಾಷ್ಠತೆ ಇತ್ಯಾದಿಗಳಿಂದ ಹಾಗು ರಮ್ಯಾದ್ಭುತ ಘಟನೆಗಳ ಮೂಲಕ ಪೌರಾಣಿಕ ನಾಟಕಗಳು ಜನಸಾಮಾನ್ಯರಿಗೆ ಮನೋರಂಜನೆ ನೀಡಲು ಸಾಧ್ಯವಾಯಿತು. ವೈಚಾರಿಕತೆ ಆಗಿನ್ನೂ ಜನರ ಮನಸ್ಸನ್ನು ಹೊಕ್ಕಿರದ ಕಾರಣ ಪೌರಾಣಿಕ ನಾಟಕಗಳು

ಪ್ರಾರಂಭದ ಹಂತದಲ್ಲಿ ಅದ್ಭುತವಾದ ಯಶಸ್ಸು ಗಳಿಸಿದ್ದವು. ಶಿಕ್ಷಣದಿಂದ ದೂರವಿದ್ದ ಜನರಿಗೆ ವೈಚಾರಿಕ ಜ್ಞಾನವಿಲ್ಲದ ಕಾರಣ, ನಾಟಕಗಳಲ್ಲಿನ ಪಾತ್ರಾಭಿನಯಕ್ಕೆ ಭಾವ ಪರವಶರಾಗುತ್ತಿದ್ದರು.

"ಶಿಕ್ಷಣವೇ ಇಲ್ಲದ ಅಸಂಖ್ಯಾತ ಜನರಿಗೆ ನಾಟಕ ಮಾಧ್ಯಮ ಅಗತ್ಯವಾಗಿತ್ತು. ಈ ಉದ್ದೇಶಕ್ಕಾಗಿಯೇ ಅವರಿಗೆ ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳು ಮೊದಲ ಆಯ್ಕೆಯಾಗಿದ್ದವು. (ಸಮಾಕಾಲೀನ ಸಮಸ್ಯೆಗಳನ್ನು ಹೇಳಬೇಕೆಂದಾಗಲೂ, ಅವನ್ನೂ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಹೇಳಬೇಕಾಗಿತ್ತು) ಹಾಗಾಗಿ ಎಲ್ಲಾ ವರ್ಗದ ಜನರೂ ಇವನ್ನು ಮೆಚ್ಚಿಕೊಳ್ಳುತ್ತಿದ್ದರು. ಅಲ್ಲಿ ಕುಳಿತಷ್ಟು ಕಾಲವೂ ತಮ್ಮ ಸುಖ-ದುಃಖಗಳನ್ನು ಮರೆತು ನಾಟಕಗಳಲ್ಲಿ ತಲ್ಲೀನರಾಗಿಬಿಡುತ್ತಿದ್ದರು". ಆದರೆ ಬ್ರಿಟೀಷರ ಶಿಕ್ಷಣ ಕ್ರಮದಿಂದ ಹೊಸ ಆಧುನಕತೆಗೆ ಜನ ತಮ್ಮನ್ನು ತಾವು ತೆರೆದುಕೊಂಡರು. ಇಂಗ್ಲಿಷ್‌ನ ಹಲವಾರು ನಾಟಕಗಳನ್ನು ಓದಿಕೊಂಡು ಹೊಸ ಬಗೆಯ ಆಲೋಚನೆಯತ್ತ ಹೊರಳಿಕೊಂಡರು. ಶಾಲಾ ಕಾಲೇಜುಗಳಲ್ಲಿ ಅವರು ಕಲಿತು ಪ್ರದರ್ಶಿಸುತ್ತಿದ್ದ ಇಂಗ್ಲಿಷ್ ನಾಟಕಗಳು ನಮ್ಮ ನಾಟಕಗಳಿಗೆ ಭಿನ್ನವಾಗಿದ್ದ ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟವು. ಇದರಿಂದ ಆಧುನೀಕಗೊಳ್ಳುತಿದ್ದ ನಗರದ ವಿದ್ಯಾವಂತ ಪ್ರೇಕ್ಷಕರಿಗೆ, ಈ ಪೌರಾಣಿಕ ನಾಟಕಗಳು ಸಮಕಾಲೀನ ಸಮಾಜದಿಂದ ಬಹುದೂರದಲ್ಲಿರುವುದನ್ನು ಗುರುತಿಸಲು ತಡವಾಗಲಿಲ್ಲ. ಇದರಿಂದಾಗಿ ಹವ್ಯಾಸಿ ರಂಗಭೂಮಿ ಹೊಸ ಆಲೋಚನಾ ಕ್ರಮದಂಥೇ ಪ್ರೇಕ್ಷಕರನ್ನು ತನ್ನತ್ತ ಸೆಳೆವ ಕಾರ್ಯಮಾಡಿತು.

ಹವ್ಯಾಸಿ ನಾಟಕಗಳಲ್ಲಿ ಪೌರಾಣಿಕ ನಾಟಕಗಳು ಹೊಸ ರೂಪ ಪಡೆದುಕೊಳ್ಳತೊಡಗಿದವು. ವೃತ್ತಿರಂಗಭೂಮಿಯ ನಾಟಕಗಳಲ್ಲಿ ಸೀತೆ-ಸಮಾಜದಲ್ಲಿ ಸ್ತ್ರೀ ಪರಿವಾರದ ಪಾತಿವ್ರತೆಗೆ, ರಾಮ-ಪುರುಷರ ಸನ್ನಡತೆಗೆ, ಕರ್ಣ-ಧಾನಗುಣಕ್ಕೆ ಹೀಗೆ ಕೃಷ್ಣ, ಭೀಮ, ದುರ್ಯೋಧನ, ಧರ್ಮರಾಯರಂತಹ ಹಲವು ಮಂದಿ ಪುರಾಣ ಪುರುಷರು ಸಮಾಜಕ್ಕೆ ಆದರ್ಶವಾಗಿರುತ್ತಿದ್ದರು. ಜನರೂ ಕೂಡ ಈ ಆದರ್ಶ ಗುಣಗಳನ್ನೇ ಅಪೇಕ್ಷಿಸುತ್ತಿದ್ದರು. ಆಧುನಕತೆಯೆಡೆಗೆ ರಂಗಭೂಮಿ ವಾಲತೊಡಗಿದಾಗ ಪೌರಾಣಿಕ ಕಥಾವಸ್ತುವನ್ನು ನೋಡುವ ಕ್ರಮ ವೈಜ್ಞಾನಿಕವಾಗಿ ಮಾರ್ಪಾಡಾಯಿತು. "ಆರಾಧನಾ ಮೂಲವಾದ ಬಯಲಾಟಗಳು, ನೀತಿ ಮೂಲವಾಗಿರುವ ವೃತ್ತಿರಂಗದ ಮೇಲೆ ತಮ್ಮ ಪ್ರಭಾವವನ್ನು ಬೀರಲಾರಂಭಿಸಿದಾಗ ಕ್ರಮೇಣ ಪೌರಾಣಿಕ ನಾಟಕಗಳ ಪ್ರಯೋಗಗಳು ನಶಿಸಲಾರಂಬಿಸಿ, ವೈಚಾರಿಕತೆಯನ್ನಾಧರಿಸಿದ ನವೀನ ರೂಪವನ್ನು ಪಡೆದವು.

ಶ್ರೀರಂಗರಂತಹ ಹಲವಾರು ನಾಟಕಕಾರರು ಪುರಾಣ ಮೂಲದ ಕಥಾವಸ್ತುವನ್ನು ವ್ಯಂಗ್ಯ ದೃಷ್ಟಿಕೋನದಲ್ಲಿ ಬಿಂಬಿಸಿ ಅವುಗಳನ್ನು ವೈಚಾರಿಕತೆಯತ್ತ ಪರಿವರ್ತಿಸಿದರು. ಹೀಗಾಗಿ ಪುರಾಣ ಪುರುಷರು (ಪಾತ್ರಗಳು) ತಮ್ಮಲ್ಲಿರುವ ದೈವೀಕತೆಯನ್ನು ಕಳೆದುಕೊಂಡು ಮಾನವ ಮಾತ್ರರಾಗಿ ಪವಾಡದಂಥ ಅದ್ಭುತ ಸನ್ನಿವೇಶಗಳನ್ನು ಸೃಷ್ಟಿಸಲಾರದಾದರು". ಹೀಗೆ ಪೌರಾಣಿಕ ಕಥಾವಸ್ತುಗಳು ಆಧುನಕತೆಗೆ ತೆರೆದುಕೊಂಡು ಹೊಸ ರೂಪವನ್ನು ಪಡೆದುಕೊಂಡವು.

ವೃತ್ತಿರಂಗಭೂಮಿಯ ಪೌರಾಣಿಕ ನಾಟಕಗಳಾದ ಉಷಾಹರಣ, ಕುರುಕ್ಷೇತ್ರ, ಚಿತ್ರಾಂಗದ, ದೈವದುರಂತ, ಕರ್ಣ, ರೇಣುಕ ಎಲ್ಲಮ್ಮ, ಶ್ರೀಕೃಷ್ಣಲೀಲೆ, ಲವಕುಶ ಹೀಗೆ ಹಲವು ನಾಟಕಗಳ ಕಥಾವಸ್ತುಗಳು ಮೂಲ ಮಹಾಕಾವ್ಯಗಳಲ್ಲಿನ ಕೆಲವು ಭಾಗಗಳಾಗಿವೆ. ಮೂಲ ಕಥೆಯಲ್ಲಿರುವಂತೆಯೇ ಇಲ್ಲಿ ಪಾತ್ರಗಳನ್ನು ಸೃಷ್ಟಿಸಲಾಗಿದ್ದು, ಪ್ರೇಕ್ಷಕರಲ್ಲಿ ಭಕ್ತಿಯನ್ನು, ನೀತಿ- ಧರ್ಮ ಭಾವವನ್ನು ಮೂಡಿಸುತ್ತವೆ. ದುರ್ಯೋಧನ, ದುಶ್ಯಾಸನ, ಶಕುನಿ,

ಸೈಂದವ, ದುಶ್ಶಲೆ ಎಲ್ಲರೂ ಸಹ ದುಷ್ಟ ಪಾತ್ರಗಳೆನ್ನುವ ಹಾಗೆಯೇ ಇಲ್ಲಿನ ನಾಟಕಗಳನ್ನು ಚಿತ್ರಿಸಲಾಗಿದೆ. ಪ್ರೇಕ್ಷಕರೂ ಸಹ ಅದೇ ಮನೋಧೋರಣೆಯಲ್ಲಿ ನಾಟಕಗಳನ್ನು ವೀಕ್ಷಿಸುತ್ತಾರೆ. ಏಕೆಂದರೆ ಬೇರೆ ವೈಚಾರಿಕ ಆಲೋಚನೆಗೆ ಈ ನಾಟಕಗಳು ದಾರಿ ಮಾಡಿಕೊಡುವುದಿಲ್ಲ. ಹಾಗೆಯೇ ಶ್ರೀ ಕೃಷ್ಣ, ಅರ್ಜುನ, ಭೀಮ, ಧರ್ಮರಾಯ, ದ್ರೌಪದಿ ಈ ಪಾತ್ರಗಳೆಲ್ಲ ಮೌಲ್ಯಯುತ ಪಾತ್ರಗಳಾಗಿ ಬಿಂಬಿತವಾಗುತ್ತವೆ. ದುರ್ಯೋಧನನಲ್ಲಿ ಸ್ವಾಭಿಮಾನ, ಉನ್ನತ ವ್ಯಕ್ತಿತ್ವ, ಅಸಾಧಾರಣ ಶಕ್ತಿ ಹೀಗೆ ಒಳ್ಳೆಯ ಮೌಲ್ಯಗಳಿದ್ದರೂ, ದುಷ್ಟ ಪಾತ್ರವಾಗಿ ಚಿತ್ರಿತನಾಗುತ್ತಾನೆ. ಭೀಮಾರ್ಜುನರು ಬೇರೆಯವರನ್ನು ವಂಚಿಸಿ (ಉದಾ: ಅರ್ಜುನ ಏಕಲವ್ಯನನ್ನು, ಭೀಮ ದುರ್ಯೋಧನನನ್ನು) ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಎಲ್ಲರ ಮುಂದೆ ತಾವೇ ಸತ್ಯಶೀಲರು ಎನ್ನಿಸಿಕೊಳ್ಳುತ್ತಾರೆ. ಆದರೆ ಇಂತಹ ಯಾವುದೇ ವೈಚಾರಿಕ ಮನೋಧೋರಣೆಯನ್ನು ವೃತ್ತಿರಂಗ ನಾಟಕಗಳು ತಮ್ಮ ನಾಟಕದೊಳಗೆ ತರಲಿಲ್ಲ. ಇದರಿಂದ ಹವ್ಯಾಸಿ ನಾಟಕದ ಉಗಮಕ್ಕೆ ದಾರಿಯಾಯಿತು. “ಈ ಬೆಳವಣಿಗೆಯು ವೃತ್ತಿ (ಕಂಪನ) ನಾಟಕಗಳ ಪ್ರಭಾವಳಿ ಇಳಿತಾಯವಾಗಲು ಕಾರಣವಾಯಿತು.

ಶಿಕ್ಷಣದ ವ್ಯಾಪಕ ಪ್ರಭಾವವು ವೈಚಾರಿಕ ದೃಷ್ಟಿಕೋನದ ಉಗಮಕ್ಕೆ ನಾಂದಿಯಾಯಿತು. ಸಮಾಜದ ವಿವಿಧ ಕ್ಷೇತ್ರಗಳಲ್ಲಾದ ಬಗಲಾವಣೆಯು ಸಾಹಿತ್ಯ ಲೋಕವನ್ನು ಪ್ರವೇಶಿಸಿತು. ಸಾಹಿತ್ಯ ಕೃತಿಯ ವಸ್ತು ಹಳೆಯದಾದರೂ ಅದನ್ನು ನೋಡುವ ದೃಷ್ಟಿಯಲ್ಲಿ ಹೊಸತನವೊಂದು ಮೂಡಿತು. ಈಗಾಗಲೇ ಅಸ್ತಿತ್ವದಲ್ಲಿದ್ದ ಜನಪದ, ಪೌರಾಣಿಕ, ಐತಿಹಾಸಿಕ ಪಾತ್ರಗಳು ತಮ್ಮ ಚಮತ್ಕಾರೀ ಗುಣವನ್ನು ಕಳೆದುಕೊಂಡು ಶ್ರೀ ಸಾಮಾನ್ಯರ ತರ್ಕಕ್ಕೆ ಮತ್ತು ವಿಮರ್ಶೆಗೆ ಒಳಗಾದವು. ಬದುಕಿನ ಯಥಾವತ್ತಾದ ಚಿತ್ರಣ ಮತ್ತು ಸಮಕಾಲೀನ ಜೀವನದೊಂದಿಗೆ ತಳುಕು ಹಾಕಿ, ಪಾತ್ರದ ಅಂತರಂಗವನ್ನು ಕೆದಕಿ, ಅದರೊಳಗಿನ ಒಳಾತೋಟಿಗಳನ್ನು ಹೊರಹೊಮ್ಮಿಸುವುದು ಆಧುನಕ ನಾಟಕಸಾಹಿತ್ಯದ ಧೋರಣೆಯಾಯಿತು”. ಅದೇ ರೀತಿ ವೃತ್ತಿರಂಗದ ಪೌರಾಣಿಕ ನಾಟಕಗಳ ಕೆಲವು ಸಂಭಾಷಣೆಗಳು, ಕಂದಪದ್ಯಗಳು ನೇರವಾಗಿ ಪ್ರೇಕ್ಷಕರಿಗೆ ಅರ್ಥವಾಗುತ್ತಿರಲಿಲ್ಲ. “ನಮ್ಮ ಪೌರಾಣಿಕ ನಾಟಕಗಳ ಭಾಷೆ ಕೂಡ ಸಂಸ್ಕೃತಮಯ, ಕೃತಕ, ಗ್ರಾಂಥಿಕ, ಓಜಸ್ವಿ ಭಾಷೆಯಾಗಿದ್ದು, ಎಷ್ಟೋ ವೇಳೆ ಪಾಮರ ಪ್ರೇಕ್ಷಕರಿಗೆ ಲಯ ಮಾಧುರ್ಯವನ್ನಷ್ಟೇ ಕೊಟ್ಟು ಸಂತೃಪ್ತಗೊಳಿಸುತಿತ್ತು. ಇಂತಹ ಭಾಷೆಯನ್ನು ಒಟ್ಟು ಸಹಜವಾಗಿ ಮಾತನಾಡುವ ಪಾತ್ರಗಳು ಕೇವಲ ಹಾಸ್ಯಗಾರರು, ಸಾಮಾನ್ಯ ಪಾತ್ರಗಳು”.

ಈ ರೀತಿಯ ವಿಚಿತ್ರ ವೇಷಭೂಷಣಗಳ ಮೂಲಕ, ವಿಲಕ್ಷಣ ಭಾಷೆ, ಪವಾಡಗಳು, ಧರ್ಮಶಾಸ್ತ್ರದ ಮಾತುಗಳು ಹೊಸ ಪೀಳಿಗೆಗೆ ಹಿಡಿಸದೆ ಈ ನಾಟಕಗಳು ಹೊಸ ಆಯಮವನ್ನು ಪಡೆದುಕೊಂಡವು.

## ಆಧುನಕ ಕನ್ನಡ ರಂಗಭೂಮಿ – ಪೌರಾಣಿಕ ನಾಟಕಗಳು

“ಖುಷಿಗಾಗಿ ನಾಟಕವಾಡುವವರು ಹವ್ಯಾಸಿ ರಂಗಭೂಮಿಯವರು. ಇಲ್ಲಿರುವವರು ಬೇರೆ ಕೆಲಸದಲ್ಲಿರಬಹುದು ಅಥವಾ ನಿರುದ್ಯೋಗಿಗಳಾಗಿಯೂ ಇರಬಹುದು. ಅದೇನೇ ಆಗಿದ್ದರೂ ನಾಟಕದಿಂದಂತೂ ಅವರಿಗೆ ಲಾಭವಿಲ್ಲ. ಖುಷಿಗಾಗಿ ಮಾಡುವ ಕೆಲಸ ಎಂದಾಗ ಕೈಯಿಂದ ಹಣ ಖರ್ಚು ಮಾಡಿಕೊಂಡು ನಾಟಕವಾಡಲೂ ಅವರು ಸಿದ್ಧ. ಆದ್ದರಿಂದಲೇ ಅವರಿಗೆ ಹವ್ಯಾಸಿಗಳು ಎನ್ನುವ ಹೆಸರು ಬಂದದ್ದು”. ಕೈಲಾಸಂ ಮತ್ತು ಶ್ರೀರಂಗರು ವೃತ್ತಿ

ರಂಗಭೂಮಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೇ, ಇದಕ್ಕೆ ವಿರುದ್ಧವಾಗಿ ನಾಟಕಗಳನ್ನು ರಚಿಸಲು ಮುಂದಾದರು. ವೃತ್ತಿ ರಂಗಭೂಮಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇದರಲ್ಲಿರುವ ಒಳ್ಳೆಯ ಅಂಶಗಳನ್ನು ಸ್ವೀಕರಿಸಿ, ಆ ಮೂಲಕ ಉತ್ತಮ ನಾಟಕಗಳನ್ನು ಕಟ್ಟಬಹುದಿತ್ತು. ಆದರೆ ವೃತ್ತಿರಂಗಭೂಮಿಗಿಂತ ವಿಭಿನ್ನವಾಗಿ ನಾಟಕವನ್ನು ಬರೆಯಲೇಬೇಕೆಂದು ನಿರ್ಧರಿಸಿ, ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ನಡುವೆ ಕಂದಕವನ್ನು ಸೃಷ್ಟಿಸಿದರು. ಕನ್ನಡ ರಂಗಭೂಮಿ ಅವನತಿಯ ಹಾದಿಯನ್ನು ಹಿಡಿದಿದ್ದಾಗ ಕೈಲಾಸಂ ಮತ್ತು ಶ್ರೀರಂಗರು ಹೊಸ ಬಗೆಯ ನಾಟಕಗಳನ್ನು ಬರೆದರು. ಈ ನಾಟಕಗಳನ್ನು ನೋಡಿ ಪ್ರಯೋಗಶೀಲರು ಹುಚ್ಚೆದ್ದು ಕುಣಿದರು. ಇಂಥ ಹೊಸ ಬಗೆಯ ನಾಟಕಗಳ ಅಗತ್ಯ ಆ ಕಾಲಕ್ಕೆ ಇತ್ತು. ಕಾಲದ ಅಗತ್ಯವನ್ನು ಈ ಇಬ್ಬರೂ ನಾಟಕಕಾರರು ಪೂರೈಸಿದರು ಎನ್ನುವುದನ್ನು ನಾವು ಮರೆಯುವಂತಿಲ್ಲ. ಹೀಗೆ ಇವರಿಬ್ಬರೂ ಹೊಸ ಬಗೆಯ ನಾಟಕಗಳಿಗೆ ನಾಂದಿ ಹಾಡಿದರು. ಹವ್ಯಾಸಿ ರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳು ಪೌರಾಣಿಕ ವಸ್ತುವನ್ನು ಸಂಪೂರ್ಣವಾಗಿ ಒಪ್ಪದೆ ಅಲ್ಲಿನ ವಸ್ತುಸ್ಥಿತಿಯನ್ನು ವೈಚಾರಿಕವಾಗಿ ಆಲೋಚನೆ ಮಾಡಲು ಮುಂದಾದವು. ಉದಾಹರಣೆಗೆ ಶ್ರೀರಂಗರ 'ರಂಗಭಾರತ', ಕುವೆಂಪುರವರ 'ಬೆರಳ್ಗೆ ಕೊರಳ್', 'ಶೂದ್ರತಪಸ್ವಿ', 'ಕುರುಕ್ಷೇತ್ರ'. ಗೋವಿಂದಪೈರವರ 'ಹಬ್ಬೆರಳು', ಬಿ.ಎಂ.ಶ್ರೀರವರ 'ಅಶ್ವತ್ಥಾಮನ್', 'ಗದಾಯುದ್ದ ನಾಟಕಂ', ಗಿರೀಶ್ ಕಾನಾಡರ 'ಅಗ್ನಿ ಮತ್ತು ಮಳೆ', 'ಯಯಾತಿ', ಹೆಚ್.ಎಸ್. ಶಿವಪ್ರಕಾಶರ 'ಮಾಧವಿ', ಸಿದ್ದಲಿಂಗಯ್ಯನವರ 'ಏಕಲವ್ವ' ಹೀಗೆ ಹಲವಾರು ಪೌರಾಣಿಕ ನಾಟಕಗಳು ಐತಿಹಾಸಿಕ ವಸ್ತುವನ್ನು ವೈಚಾರಿಕ ದೃಷ್ಟಿಕೋನದಿಂದ ನೋಡುತ್ತವೆ. 'ಶೂದ್ರತಪಸ್ವಿ' ನಾಟಕದಲ್ಲಿ ಕುವೆಂಪುರವರು ಶಂಬೂಕನೆಂಬ ಶೂದ್ರನನ್ನು ಕೊಲ್ಲಿಸದೆ, ಶೂದ್ರರೂ ಸಹ ತಪಸ್ಸು ಮಾಡಲು ಅರ್ಹರು, ಅಂದರೆ ಪ್ರಸ್ತುತ ಸಮಾಜದಲ್ಲಿ ಶೂದ್ರರಿಗೆ ಸಿಗಬೇಕಾದ ಸ್ಥಾನಮಾನಗಳು ಹಾಗೂ ಬ್ರಾಹ್ಮಣ ಜನಾಂಗದ ದರ್ಪಿಷ್ಟ ಮನೊಧೋರಣೆಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ನಾಟಕದಲ್ಲಿ ಇವರು ಪುರಾಣವಸ್ತುವನ್ನು ಪುನಃ ರೂಪಿಸುವ ಮೂಲಕ ಸಮಕಾಲೀನ ಸಂವೇಧನೆಯನ್ನು ಅಭಿವ್ಯಕ್ತಿಸಿದ್ದಾರೆ. ಗಿರೀಶ್ ಕಾರ್ನಾಡ್‌ರ 'ಅಗ್ನಿ ಮತ್ತು ಮಳೆ' ನಾಟಕದಲ್ಲಿ ಅರವಸು ಬ್ರಾಹ್ಮಣನಾದರೂ ನಿಷಾದರ ಕನ್ಯೆಯಾದ ನಿತ್ತಿಲೆಯನ್ನು ಪ್ರೀತಿಸುತ್ತಾನೆ. ಕೊನೆಗೆ ಇವರಿಬ್ಬರನ್ನು ಅಂದಿನ ಸಾಮಾಜಿಕ ವ್ಯವಸ್ಥೆ ಒಂದಾಗಲು ಬಿಡದೆ ದೂರಮಾಡುತ್ತದೆ. ವಿಶಾಖೆಯ ಅಂತ್ಯಸ್ಥಿತಿ ರೈಭ್ಯನ ದರ್ಪಿಷ್ಟ ಮನೋಧೋರಣೆ ಇವೆಲ್ಲವೂ ಸಹ ನಾವು ಇಂದಿನ ಸಮಾಜದಲ್ಲಿನ ಕೆಟ್ಟ ಆಚರಣೆ ಮತ್ತು ವ್ಯವಸ್ಥೆಯನ್ನು ಪ್ರಶ್ನಿಸುವಂತಹದ್ದು. ಡಾ. ಸಿದ್ದಲಿಂಗಯ್ಯನವರ ಏಕಲವ್ಯ ನಾಟಕವನ್ನು ನೋಡುವುದಾದರೆ ಇಲ್ಲಿ ಏಕಲವ್ಯ ಕಾಡಿನಿಂದ ನಾಡಿಗೆ ವಿದ್ಯೆ ಕಲಿಯಲು ಹೋಗಿ ಅಲ್ಲಿಂದ ಅವಮಾನಿತನಾಗಿ ಕಾಡಿಗೆ ಹಿಂದಿರುಗುವನು. ಕಾಡು ಮತ್ತು ನಾಡಿನಲ್ಲೇ ಯಾರೂ ಕಲಿಯದ ಶಬ್ಧವೇದಿ ವಿದ್ಯೆ ಕಲಿತರೂ, ದ್ರೋಣಾಚಾರ್ಯರು ಸ್ವಾರ್ಥಕ್ಕೋಸ್ಕರ ಏಕಲವ್ಯನ ವಿದ್ಯೆಯನ್ನು ಕಸಿದುಕೊಳ್ಳುವರು. ಈ ಪ್ರಸಂಗ ಶತ–ಶತಮಾನಗಳಿಂದ ತುಳಿತಕ್ಕೊಳಗಾದ ಜನರು ಬುದ್ಧಿವಂತರಾದರೂ ಸಹ ಏನನ್ನೂ ಸಾಧಿಸದೆ ಹತಾಶರಾಗಿಯೇ ಬಾಳುವ ಪರಿಸ್ಥಿತಿಯನ್ನು ತಿಳಿಸುತ್ತದೆ. ವರ್ಣಾಶ್ರಮ ಧರ್ಮದ ಕಟ್ಟುಪಾಡುಗಳ ಅಮಾನವೀಯ ಮುಖಗಳನ್ನು ಈ ನಾಟಕ ತೆರೆದಿಡುತ್ತದೆ. ನಗರ ಜೀವನ ಮತ್ತು ಅರಣ್ಯ ಜೀವನದೊಂದಿಗೆ ನಡೆಯುವ ಸಂಘರ್ಷವನ್ನೂ ಈ ನಾಟಕ ಕಟ್ಟಿಕೊಡುತ್ತದೆ.

ವೃತ್ತಿರಂಗ ಭೂಮಿಯಲ್ಲಿ ಪುರಾಣ ಕಾವ್ಯಗಳಿಂದ ಕಥಾವಸ್ತುವನ್ನು ನೇರವಾಗಿ ಸ್ವೀಕರಿಸಿ ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು. ಆನೇಕರು ಈ ನಾಟಕಗಳನ್ನು ಭಕ್ತಿಯಿಂದ ನೋಡುತ್ತಿದ್ದರು. ಆ ಭಕ್ತಿಯ ಅತಿರೇಕದಿಂದಲೇ ಅಲ್ಲಿರುವ ತಪ್ಪುಗಳು, ಅಮಾನವೀಯತೆ ಕಾಣುತ್ತಿರಲಿಲ್ಲವೆಂದು ತೋರುತ್ತದೆ. ಪೌರಾಣಿಕ ಕಥಾವಸ್ತುವಿನಲ್ಲಿ ಹಳೆಗನ್ನಡ ಕಾವ್ಯ ಶೈಲಿಯ ಬಳಕೆಯೂ ಹೆಚ್ಚಾಗಿತ್ತು. ಈ ನಾಟಕಗಳಲ್ಲಿ ವೃತ್ತಗಳು, ಕಂದಪದ್ಯಗಳಿಂದ ತುಂಬಿದ ಕಾವ್ಯದ ರಚನೆ ಮಹತ್ವದಿಂದ ಕೂಡಿರುತ್ತಿತ್ತು". ಸಾಮಾನ್ಯವಾಗಿ ಪುರಾಣಗಳು ಜನಸಾಮಾನ್ಯರಿಗೆ ಚಿರಪರಿಚಿತ ಆಗಿದ್ದುದರಿಂದ, ವಿವರಗಳು ಪದ್ಯ–ವೃತ್ತಗಳು ಗದ್ದಲದಲ್ಲಿ ತಿಳಿಯದಿದ್ದರೂ, ಒಟ್ಟು ಅಭಿಪ್ರಾಯವನ್ನು ಗ್ರಹಿಸುವ ಪೂರ್ವಸಿದ್ಧತೆ ಪ್ರೇಕ್ಷಕನಗಿತ್ತು. ಇದರಿಂದ ನಾಟಕ ಪಂಡಿತರಿಗೊಂದು ಬಗೆ, ಸಾಮಾನ್ಯ ಪ್ರೇಕ್ಷಕರಿಗೊಂದು ಬಗೆ ಅರ್ಥವಾಗಿ ಸರ್ವರಿಗೂ ಪ್ರೇಕ್ಷಣೀಯವಾಗಿತ್ತು". ಹೀಗೆ ಪೌರಾಣಿಕ ನಾಟಕಗಳು ವೃತ್ತಿರಂಗಭೂಮಿಯಲ್ಲಿ ಮನರಂಜನೆಗಾಗಿ ಮಾತ್ರವೇ ಸ್ಥಾನವನ್ನು ಪಡೆದುಕೊಂಡಿದ್ದವು. ಇಂಗ್ಲೀಷ್ ಶಿಕ್ಷಣದಿಂದ ವೈಚಾರಿಕತೆ ಮೂಡಿ ಜನರ ಆಲೋಚನಾಕ್ರಮ ಬದಲಾಯಿತು. ಇದಕ್ಕೆ ತಕ್ಕಂತೆ ಜನ ಪ್ರತಿಯೊಂದು ವಿಷಯವನ್ನು ಚರ್ಚಿಸುವ ವೈಚಾರಿಕವಾಗಿ ಚಿಂತಿಸುವ ಮನೋಧೋರಣೆಯನ್ನು ಬೆಳೆಸಿಕೊಂಡರು. ಅದರಂತೆ ವಿಲಾಸಿ ಅಥವಾ ಹವ್ಯಾಸಿ ರಂಗಭೂಮಿ ಹುಟ್ಟಿಕೊಂಡು, ಪೌರಾಣಿಕ ವಸ್ತುವನ್ನು ಪ್ರೇಕ್ಷಕರಿಗೆ ಹೊಸದಾಗಿ ಅರ್ಥೈಸುವ ಕ್ರಮವನ್ನು ರೂಢಿಸಿಕೊಂಡರು. ಈ ಕ್ರಮಕ್ಕೆ ಪ್ರೇಕ್ಷಕರಿಂದ ಮನ್ನಣೆಯೂ ದೊರೆತು ಹವ್ಯಾಸಿ ನಾಟಕಗಳನ್ನು ನೋಡುವ, ಓದುವ, ಚಿಂತಿಸುವ ಮತ್ತು ಚರ್ಚಿಸುವ ಪ್ರಕ್ರಿಯೆಯೂ ಆರಂಭಗೊಂಡಿತು.

## ಪರಾಮರ್ಶನ ಗ್ರಂಥಗಳು:


1. ಕಟ್ಟಿಮನ, (2003). ಕರ್ನಾಟಕ ರಂಗಭೂಮಿ ವೈಭವ, ಮನೋಹರಿ ಪ್ರಿಂಟರ್ಸ್, ಹುಬ್ಬಳ್ಳಿ.
2. ಕನವಳ್ಳಿ ಸದಾನಂದ, (1979). ನಾಟಕರತ್ನ ಗುಬ್ಬಿ ವೀರಣ್ಣನವರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೊಂಟದಾರ್ಯ ಮಠ, ಗದಗ.
3. ಕುರ್ತಕೋಟಿ ಕೀರ್ತಿನಾಥ (ಸಂ), (1974). ಕನ್ನಡ ವೃತ್ತಿರಂಗಭೂಮಿ ಅಂದು ಇಂದು, ಕರ್ನಾಟಕ ವಿಶ್ವವಿದ್ಯಲಯ, ಧಾರವಾಡ.
4. ಕುರ್ತಕೋಟಿ ಕೀರ್ತಿನಾಥ (ಸಂ), (1959). ನಡೆದುಬಂದದಾರಿ, ಮನೋಹರ ಗ್ರಂಥಮಾಲಾ, ಧಾರವಾಡ.
5. ಕುಲಕರ್ಣಿ ಎನ್ಕೆ, (1970). ಶ್ರೀ ಗರುಡ ಸದಾಶಿವರಾಯರು, ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು.
6. ದಯಾನಂದ ಕನ್ನಾಳ್, (2010) ಬಳ್ಳಾರಿ ಜಿಲ್ಲೆಯ ರಂಗಭೂಮಿ , ಪ್ರಭು ದೇವರ ಜನಕಲ್ಯಾಣ ಸಂಸ್ಥೆ.
7. ಪಾರ್ಶ್ವನಾಥ ಹೆಚ್.ವಿ. (2003) ರಂಗಲೋಕ, ಸಂವಹನ ಪ್ರಕಾಶನ, ಮೈಸೂರು.
8. ಪಾಟೀಲ ಎಚ್.ಎಸ್, (2003) ಕೊಪ್ಪಳ ಜಿಲ್ಲೆಯ ರಂಗಭೂಮಿ, ಗುಲ್ಬರ್ಗ ವಿಶ್ವವಿದ್ಯಾಲಯ .
9. ಪುಟ್ಟಸ್ವಾಮಯ್ಯ ಬಿ. (1983). ಕನ್ನಡ ರಂಗಭೂಮಿ ನಡೆದುಬಂದದಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
10. ಪ್ರಹ್ಲಾದ ಮುದಗಲ್ಲ, (1995). ಕನ್ನಡ ರಂಗ ಪರಂಪರೆ, ಬಿರ್ಲ ಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ(ರಿ). ಬೆಂಗಳೂರು.
11. ರಂಗನಾಥ್ ಹೆಚ್.ಕೆ. (1990). ಕನ್ನಡ ರಂಗಭೂಮಿ ವಿಕಾಸ ( ಪ್ರಂಯೋಗಾಂಗವನ್ನು ದೃಷ್ಟಿಯಲ್ಲಿಟ್ಟುಕೊಂಡು), ಅಭಿನಯ ಪ್ರಕಾಶನ, ಮೈಸೂರು.
12. ರಂಗನಾಥ್ ಹೆಚ್.ಕೆ. (1993) ವೃತ್ತಿರಂಗ ದರ್ಶನ , ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.